ಅದು ಅವನ ಮನಸಿನಲ್ಲಿ ಏನೋ ಪರಿವರ್ತನೆ ತಂದಿತು. ಊರಿಗೆ ಬಂದು ಇಡೀ ಊರನ್ನೆ ಬದಲಾಯಿಸಬೇಕೆಂಬ ಹಂಬಲ. ಇಂತಹ ಸಾಂಸ್ಕೃತಿಕ ಸಂಘರ್ಷ ಯೂರೋಪಿನಲ್ಲಿಲ್ಲ. ಆಮೇಲೆ ಆಧುನೀಕರಣ, ಸ್ವಲ್ಪಮಟ್ಟಿಗೆ ಪಶ್ಚಿಮೀಕರಣ. ಇಂಡಿಯಾದಲ್ಲಿ ಆಧುನೀಕರಣ 50–60 ವರ್ಷದಲ್ಲಿ ನಡೆಯಿತು. ಅದು ತುಂಬಾನೆ ಚಿಕ್ಕ ಅವಧಿ. ಅದೇ ಬದಲಾವಣೆ ಯುರೋಪಿನಲ್ಲಿ ಕೆಲವು ಶತಮಾನ ನಡೆಯಿತು. ಆದ್ದರಿಂದ ಇಂಡಿಯಾದಲ್ಲಿ ಈ ಆಧುನೀಕರಣ ಒಂದು ಮಾನಸಿಕ ಸಾಂಸ್ಕೃತಿಕ ಸಾಮಾಜಿಕ ಸಮಸ್ಯೆಯಾಗಿದೆ. ಹೀಗೆ ಐದು ಥೀಮ್ಸ್ ಇಟ್ಟುಕೊಂಡು ಮೂವತ್ತೈದು ಕಾದಂಬರಿ–ಕಥೆಗಳನ್ನು ಓದಿ ವಿಶ್ಲೇಷಣೆ ಮಾಡಿದೆ. ನನ್ನ ಗುರುಗಳು, ಎ.ಕೆ. ರಾಮಾನುಜನ್, ಎಂ.ಎಂ. ಕಲಬುರ್ಗಿ ಎಲ್ಲರೂ ಮೆಚ್ಚಿಕೊಂಡರು. ನನ್ನ ಗುರುಗಳಿಗೆ ಕನ್ನಡ ಸಾಹಿತ್ಯದ ಬಗ್ಗೆ ಏನೂ ಗೊತ್ತಿರಲಿಲ್ಲ. ಶಿಕಾಗೊದಲ್ಲಿದ್ದ ರಾಮಾನುಜನ್ ನಿಜವಾಗಿ ನನ್ನ ಮಾರ್ಗದರ್ಶಕರು.

◆ **ಯೂರೋಪಿನಲ್ಲಿ ಬಂಗಾಳಿ, ತಮಿಳು, ಹಿಂದಿ ಮತ್ತು ಉರ್ದು ಭಾಷೆಗಳ ಮೇಲೆ ಹೆಚ್ಚು ಅಧ್ಯಯನಗಳಾಗಲು ಕಾರಣವೇನು?**

ಇಂಡಿಯಾದಲ್ಲಿ ಅಷ್ಟು ಭಾಷೆಗಳಿವೆ. ಅಷ್ಟು ಸಾಹಿತ್ಯಗಳಿವೆ. ಇಂಡಿಯಾದ ಹೊರಗಿನ ಜನರಿಗೆ ಆ ಸಾಹಿತ್ಯಿಕ ಸಂಪತ್ತಿನ ಬಗ್ಗೆ ಗೊತ್ತಿಲ್ಲ. ಹೆಚ್ಚು ಖ್ಯಾತಿ–ಪ್ರಚಾರ ಸಿಕ್ಕಂತಹ ಸಂಸ್ಕೃತ, ಉರ್ದು, ಹಿಂದಿ, ಬಂಗಾಳಿ, ತಮಿಳು ಭಾಷೆಗಳನ್ನು ಪಾಶ್ಚಾತ್ಯ ದೇಶದಲ್ಲಿ ಕಲಿಯುವುದು ಸುಲಭ. ಸಂಸ್ಕೃತದಿಂದ ಪ್ರಯೋಜನವಿದೆ. ಫಿಲಾಸಫಿಕಲ್ ಸ್ಟಡಿಸ್‌ಗೆ ಅದು ತುಂಬಾ ಉಪಯುಕ್ತ. ಮ್ಯೂನಿಕ್ಕಿನಲ್ಲಿ ಸಂಸ್ಕೃತ ಅಧ್ಯಯನಗಳಿಗೆ ದೊಡ್ಡ ಇತಿಹಾಸವಿದೆ. ಹಿಂದಿ ಎಲ್ಲ ಕಡೆ ಇದೆ. ರಾಷ್ಟ್ರಭಾಷೆಯಾಗಬೇಕು ಎಂದು ಭಾರತ ಸರಕಾರದ ಬೆಂಬಲ ಸಿಗುತ್ತದೆ. ಮ್ಯೂನಿಕ್ಕಿನಲ್ಲಿ ಇಂಡಿಯನ್ ಕಾನ್ಸುಲೇಟ್ ಜನರಲ್ ಇದೆ. ಅಲ್ಲಿನವರು ಹಿಂದಿ ಕಾರ್ಯಕ್ರಮ ಮಾಡಿದರೆ ದುಡ್ಡು ಕೊಡುತ್ತಾರೆ. ಹೆಚ್ಚೇನಿಲ್ಲ, ಒಂದು ಊಟ ಸಿಗುತ್ತದೆ (ನಗು). ನಂತರ ತಮಿಳು. ನೂರು ವರ್ಷಗಳ ಹಿಂದೆ ಇಂಡಿಯನ್ ಸ್ಟಡೀಸ್ ಅಂದರೆ ಸಂಸ್ಕೃತ, ಪಾಳಿ, ಪ್ರಾಕೃತ. ಈ ಮೂರೂ ಪ್ರಾಚೀನ, ಉತ್ತರೀಯ ಮತ್ತು ಇಂಡೋ ಯೂರೋಪಿಯನ್ ಭಾಷೆಗಳು. ದ್ರಾವಿಡ ಭಾಷೆಗಳ ಪ್ರವೇಶ ಅಷ್ಟಾಗಿರಲಿಲ್ಲ. ದ್ರಾವಿಡ ಭಾಷೆಗಳ ಮೇಲೆ ಆಸಕ್ತಿ ತೋರಿಸಿದವರು ಹೆಚ್ಚಾಗಿ ಕ್ರೈಸ್ತಮತ ಪ್ರಚಾರಕರು. ಅವರಿಂದ ಕನ್ನಡ, ತಮಿಳು, ತೆಲುಗು, ಮಲಯಾಳಗಳಲ್ಲಿ ಆಧುನಿಕ ವ್ಯಾಕರಣ ಗ್ರಂಥಗಳು ಬಂದವು. ಆದರೆ, ಅದು ಅಕಡೆಮಿಕ್ ಕೆಲಸವಲ್ಲ. 20ನೆಯ ಶತಮಾನದಲ್ಲಿ ಸ್ವಲ್ಪ ಬದಲಾವಣೆಯಾಯಿತು. ಅದರಲ್ಲಿ ನನ್ನ ಗುರುಗಳ ದೊಡ್ಡ ಪಾತ್ರವಿದೆ. 1960ರ ಸುಮಾರಲ್ಲಿ ಅವರು ಕಾಕತಾಳೀಯವಾಗಿ ಜೆಕೊಸ್ಲೊವಾಕಿಯಾದಲ್ಲಿದ್ದರು. ಇಂಡಿಯನ್ ಕಾನ್ಸುಲೇಟ್‌ನಲ್ಲಿ ಯಾವುದೊ ಭಾರತೀಯ ರಾಷ್ಟ್ರೀಯ ಹಬ್ಬ. ಆ ಕಾಲದಲ್ಲಿ ಪ್ರಾಗ್‌ನ ಭಾರತೀಯ ಎಂಬೆಸಿಯಲ್ಲಿ ಹೆಚ್ಚು ತಮಿಳರಿದ್ದರು. ನನ್ನ ಗುರುಗಳು ಹೇಳಿದರು, 'ನಾನು ಸಂಸ್ಕೃತ ಕಲಿತಿದ್ದೀನಿ. ಅದರಲ್ಲಿ ಅದ್ಭುತವಾದ ಸಾಹಿತ್ಯ ಸಿಗುತ್ತದೆ. ಆದರೆ, ಎಲ್ಲ ಹಳೆಯದು. ನಾನೊಂದು ಜೀವಂತ ಆಧುನಿಕ ಭಾಷೆ ಕಲಿಬೇಕು'. ತಮಿಳರು ಹೇಳಿದರು, 'ನೀವು ನಮ್ಮ ಬಳಿ ಬನ್ನಿ. ತಮಿಳು ಕಲಿಯಬಹುದು'. ಗುರುಗಳು ತುಂಬಾ ಹುರುಪಿನಿಂದ ಕಲಿತರು. ಆಮೇಲೆ ತಮಿಳರು ಹೇಳಿದರು, 'ನೀವು ಇನ್ನೂ ಹೆಚ್ಚು ಕಲಿಯಬೇಕಾದರೆ ಇಂಡಿಯಾಕ್ಕೆ ಹೋಗಬೇಕು. ನಾವು ವ್ಯವಸ್ಥೆ ಮಾಡುತ್ತೇವೆ'. ಆದರೆ, ಅದು ಕೆಟ್ಟಕಾಲ. ಕಮ್ಯುನಿಸ್ಟ್ ದೇಶದ ನಿಯಮಗಳು ಇತ್ಯಾದಿ. ಅವರು ಎಂಬೆಸಿಗೆ ಹೋಗಿ ಹೇಳಿದರು, 'ಕ್ಷಮಿಸಿರಿ. ನನ್ನ ದೇಶ ನನಗೆ ಬಿಡುವುದಿಲ್ಲ'. ಆಗ ತಮಿಳರು ಸಿಟ್ಟು ಮಾಡಿಕೊಂಡು ಜೆಕ್ ಸರಕಾರದ ಹತ್ತಿರ ದೂರು ಮಾಡಿದರು. 'ಏನಿದು? ನಿಮ್ಮ ಸಂವಿಧಾನದ ಪ್ರಕಾರ ನಿಮ್ಮ ಪ್ರಜೆಗಳು ಹೊರದೇಶಕ್ಕೆ ಹೋಗಿ ಬರಬಹುದು. ಈ ಹುಡುಗ ಯಾಕೆ ತಮಿಳುನಾಡಿಗೆ ಹೋಗಿ ತಮಿಳು